161

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1197 (1342) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶಿತ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18.12.2025 |
| ಉತ್ತರಿಸುವವರು | : | ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು: (ಇಲಾಖೆವಾರು ಮಾಹಿತಿ ನೀಡುವುದು) | ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿ ಒಟ್ಟು 2,84,881 ಹುದ್ದೆಗಳು ಖಾಲಿ ಇರುತ್ತದೆ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ) | ಈ ಹುದ್ದೆಗಳನ್ನು ಭರ್ತಿ ಮಾಡಲು ನಿಗದಿಪಡಿಸಿರುವ ವೇಳಾಪಟ್ಟಿ ಮತ್ತು ಪ್ರಸ್ತುತ ಅನುಷ್ಠಾನದ ಸ್ಥಿತಿ ಏನು: | ಕಳೆದ 3 ವರ್ಷಗಳಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳ ಮೂಲಕ 8157 ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗಿದೆ ಹಾಗೂ 3081 ಹುದ್ದೆಗಳ ನೇಮಕಾತಿಯು ಪ್ರಗತಿಯಲ್ಲಿರುತ್ತದೆ.<br><br>ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 24,300 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಅನುಮೋದನೆ ನೀಡಿದೆ.<br><br>ಮುಂದುವರೆದು, ಕಲ್ಯಾಣ ಕರ್ನಾಟಕ ಭಾಗದ ವೃಂದದಲ್ಲಿನ 371-ಜೆ ರಡಿ ಖಾಲಿಯಿರುವ 32,132 ಹುದ್ದೆಗಳ ಪೈಕಿ ಶೇಕಡ 80ರಷ್ಟು ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಪರಿಭಾವಿತ ಸಹಮತಿ (Deemed Concurrence) ನೀಡಿರುತ್ತದೆ. |
| ಇ) | KPSC, ಪೊಲೀಸ್, ಶಿಕ್ಷಕರ ನೇಮಕಾತಿ ಪರೀಕ್ಷೆಗಳು ವಿಳಾಂಬವಾಗುತ್ತಿರುವುದರ ಕಾರಣವೇನು; ಈ ಪ್ರಕ್ರಿಯೆಯನ್ನು ಸಮಯಬದ್ಧವಾಗಿಸಲು ಸರ್ಕಾರ ಕೈಗೊಳ್ಳುತ್ತಿರುವ ಸುಧಾರಣಾ ಕ್ರಮಗಳು ಯಾವುವು? | ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ನಿಗಧಿಪಡಿಸುವ ಪ್ರಕ್ರಿಯೆಯಿಂದಾಗಿ ಹುದ್ದೆಗಳ ಭರ್ತಿಗೆ ತಾತ್ಕಾಲಿಕ ತಡೆ ನೀಡಲಾಗಿತ್ತು. ಒಳಮೀಸಲಾತಿ ಜಾರಿಗೊಳಿಸಿ ಆದೇಶ ಹೊರಡಿಸಿರುವ ಹಿನ್ನಲೆಯಲ್ಲಿ ಸದರಿ ಆದೇಶದನ್ವಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಈಗಾಗಲೇ ಸರ್ಕಾರದಿಂದ ನಿರ್ದೇಶನಗಳನ್ನು ನೀಡಲಾಗಿದೆ. |

**ಕಡತ ಸಂಖ್ಯೆ: ಸಿಆಸುಇ 294 ರಾಸ 2025.**

**(ಸಿದ್ದರಾಮಯ್ಯ)**
**ಮುಖ್ಯಮಂತ್ರಿ**

## ಅನುಬಂಧ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶಿತ ಕ್ಷೇತ್ರ), ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1197 (1342)ಕ್ಕೆ ಉತ್ತರ**

**2025-26ನೇ ಸಾಲಿನಲ್ಲಿ ಇಲಾಖಾವಾರು ಖಾಲಿಯಿರುವ ಹುದ್ದೆಗಳ ವಿವರ**

| ಕ್ರ.ಸಂ. | ಇಲಾಖೆಗಳು | ಒಟ್ಟು |
|---|---|---|
| 1 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 79694 |
| 2 | ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ | 37572 |
| 3 | ಒಳಾಡಳಿತ | 28188 |
| 4 | ಉನ್ನತ ಶಿಕ್ಷಣ | 13599 |
| 5 | ಪಶುಸಂಗೋಪನೆ | 11020 |
| 6 | ಕಂದಾಯ | 10867 |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 10504 |
| 8 | ಪರಿಶಿಷ್ಟ ಜಾತಿಗಳ ಕಲ್ಯಾಣ | 9646 |
| 9 | ಹಿಂದುಳಿದ ವರ್ಗಗಳ ಕಲ್ಯಾಣ | 8525 |
| 10 | ಆರ್ಥಿಕ | 7668 |
| 11 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | 7659 |
| 12 | ಕೃಷಿ | 6876 |
| 13 | ಅರಣ್ಯ | 6478 |
| 14 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ | 6190 |
| 15 | ಅಲ್ಪಸಂಖ್ಯಾತರ ಕಲ್ಯಾಣ | 4972 |
| 16 | ಸಹಕಾರ | 4726 |
| 17 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 4010 |
| 18 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 3391 |
| 19 | ರೇಷ್ಮೆ | 3337 |
| 20 | ತೋಟಗಾರಿಕೆ | 2914 |
| 21 | ಕಾರ್ಮಿಕ | 2668 |
| 22 | ಪರಿಶಿಷ್ಟ ಪಂಗಡಗಳ ಕಲ್ಯಾಣ | 2435 |
| 23 | ಸಾರಿಗೆ | 1541 |
| 24 | ಆಹಾರ ಮತ್ತು ನಾಗರೀಕ ಸರಬರಾಜು | 1442 |
| 25 | ಲೋಕೋಪಯೋಗಿ | 1408 |
| 26 | ನಗರಾಭಿವೃದ್ಧಿ | 914 |
| 27 | ಸಣ್ಣ ನೀರಾವರಿ | 869 |
| 28 | ಮೀನುಗಾರಿಕೆ | 838 |
| 29 | ಯೋಜನೆ, ಸಾಂಖ್ಯಿಕ , ವಿಜ್ಞಾನ ಮತ್ತು ತಂತ್ರಜ್ಞಾನ | 721 |
| 30 | ಗಣಿ | 656 |
| 31 | ಭಾರಿ ನೀರಾವರಿ | 609 |
| 32 | ಕನ್ನಡ ಮತ್ತು ಸಂಸ್ಕೃತಿ | 444 |
| 33 | ಸಂಸದೀಯ ವ್ಯವಹಾರಗಳು | 433 |
| 34 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 394 |
| 35 | ಪ್ರವಾಸೋದ್ಯಮ | 386 |
| 36 | ಸಣ್ಣ ಕೈಗಾರಿಕೆ | 360 |
| 37 | ವಾರ್ತಾ | 340 |
| 38 | ಯುವಜನ ಸೇವೆಗಳು | 212 |
| 39 | ಇಂಧನ | 187 |
| 40 | ಇ - ಆಡಳಿತ | 73 |
| 41 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 61 |
| 42 | ಕೈಮಗ್ಗ ಮತ್ತು ಜವಳಿ | 44 |
| 43 | ಪರಿಸರ ಮತ್ತು ಜೀವಿಶಾಸ್ತ್ರ | 10 |
| **ಒಟ್ಟು** | | **284881** |